ಸಿ.ಸಿ. 464/2016

ಪಿಡಬ್ಲೂ ಃ 01
ದಿಃ 24-11-2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಸ್ವೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಸಸಅ ರವರಿಂದ ಃ -

ಆರೋಪಿ 1 ರಿಂದ 5 ರವರನ್ನು ಸಾಕ್ಷಿ ನೋಡಿ ಅವರನ್ನು ಪೊಲೀಸರು ಅಡಿಕೆ ಕಳ್ಳತನದ ವಿಚಾರದಲ್ಲಿ ಕರೆದುಕೊಂಡು ಬಂದ ವ್ಯಕ್ತಿಗಳು ಎಂದು ಗುರುತಿಸಿರುತ್ತಾರೆ .

ಪಾಟೀ ಸವಾಲು ಆರೋಪಿ ಪರ ಶ್ರೀ ಯು. ಕೆ ವಕೀಲರಿಂದಃ-

ನಾನು ಡಿಗ್ರಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮಗೆ 15 ಎಕರೆ ಜಮೀನು ಇರುತ್ತದೆ. 15 ಎಕರೆಯಲ್ಲಿ ಅಡಿಕೆ ಬೆಳೆಯುತ್ತೇನೆ. ಸದರಿ ಅಸ್ತಿ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಇವತ್ತಿಗೂ ನನ್ನ ತಂದೆಯ ಹೆಸರಿಗೆ ಇರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಪಹಣಿಯನ್ನು ಹಾಜರುಪಡಿಸಿರುವುದಿಲ್ಲ. 30-40 ವರ್ಷಗಳಿಂದ ಅಡಿಕೆ ತೋಟ ಮಾಡಿರುತ್ತೇನೆ. ಅಡಿಕೆ ಸಸಿಗಳು ನಾಡಾವಳಿ ಜಾತಿ ಆಗಿರುತ್ತದೆ. ನನ್ನ ತಂದೆಯ ಕಾಲದಿಂದ ಬಂದಿರುವ ಅಡಿಕೆ ಸಸಿಗಳು . ನಮ್ಮಲ್ಲಿ ವಿಭಾಗ ಆಗಿರುವುದಿಲ್ಲ. ನಾವಿಬ್ಬರು ಅಣ್ಣ-ತಮ್ಮಂದಿರು. ತಂದೆ ಜೀವಂತಾ ಇದ್ದಾರೆ. ನ್ಯಾಯಾಲಯದಲ್ಲಿ ಮುಂದೆ ಆರೋಪಿಗಳನ್ನು ನಾನು ಪೊಲೀಸರು ತೋರಿಸಿದ ಮೇರೆಗೆ ಗುರುತಿಸುತ್ತೇನೆ. ಇವರ ಪ್ರತ್ಯೇಕ ಪರಿಚಯ ಇರುವುದಿಲ್ಲ. ನಿಮಗೆ ಆರೋಪಿಗಳ ವೈಯಕ್ತಿಕ ಪರಿಚಯ ಇಲ್ಲ ಎಂದರೆ ಸರಿ .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.